ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಮಾನ್ಯ ಅಧ್ಯಕ್ಷರೆ, ಕಾಗದಪತ್ರಗಳನ್ನು ಏನು ಈ ಸಭೆಯ ಮುಂದೆ ಮಂಡಿಸಲಾಗಿದೆ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಸಂಸತ್ ಸದಸ್ಯರ ಆಪ್ತ ಸಹಾಯಕರು ಮತ್ತು ಅವರ ಸಿಬ್ಬಂದಿಯನ್ನು ಒಪ್ಪಂದದ ಆಧಾರದ ಮೇಲೆ ಅವರ ಪದಾವಧಿಯವರೆಗೆ ಒದಗಿಸಲು ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ), ನಿಯಮಗಳು 1977ಕ್ಕೆ ತಿದ್ದುಪಡಿ ಮಾಡಿ ದಿನಾಂಕ: 11-10-2000 ರಂದು ಹೊರಡಿಸಲಾದ ಅಧಿಸೂಚನೆ....

ಅಧ್ಯಕ್ಷರು :— ಸಭೆಯ ಮುಂದೆ ಮಂಡಿಸಲಾದ ಕಾಗದಪತ್ರಗಳು ಏನಿದೆ ಅವು ಕಮಿಟಿ ಮುಂದೆ ಹೋದಾಗ ಅಲ್ಲಿ ಡಿಸ್‌ಕಷನ್ ಮಾಡಬೇಕು. ಇಲ್ಲಿ ಡಿಸ್‌ಕಷನ್ ಮಾಡುವುದಕ್ಕೆ ಆಗುವುದಿಲ್ಲ. ಆಶ್ರಯ ರಿಪೋರ್ಟ್ ಮೇಲೆ ನೀವು ಡಿಸ್‌ಕಷನ್ ಮಾಡಬಹುದು. ಹಾಗಾದರೆ ಪ್ರತಿದಿನ ನಾವೇನು ಮಾಡುತ್ತೇವೆ ಎಲ್ಲವನ್ನು ಡಿಸ್‌ಕಷನ್ ಮಾಡಬಹುದಲ್ಲ;

ಶ್ರೀ ಸಿ. ಬೈರೇಗೌಡ :— ಇದು ಬಹಳ ಮುಖ್ಯವಾಗಿರತಕ್ಕದ್ದು, ಚರ್ಚೆ ಮಾಡಬೇಕಾಗುತ್ತದೆ. ಸಮಿತಿ ಅದು ಸಮಿತಿಯಾಗುತ್ತದೆ. ಇದು ಎಂಟೈರ್ ಬಾಡಿ...

ಅಧ್ಯಕ್ಷರು :— ಹಾಗಾದರೆ ತಾವು ಸಪರೇಟ್ ನೋಟೀಸ್ ಕೊಡಿ, ಆಮೇಲೆ ಚರ್ಚೆ ಮಾಡಿ ಈ ಸ್ಟೇಜ್‌ನಲ್ಲಿ ಅದನ್ನು ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಸಿ. ಚನ್ನಿಗಪ್ಪ :— ಲೋಕಸಭಾ ಸದಸ್ಯರುಗಳಿಗೆ ಸೌಕರ್ಯವನ್ನು ಕೊಟ್ಟಾಗ ಶಾಸಕರಿಗೆ ಏಕೆ ಕೊಡಬಾರದು?

ಅಧ್ಯಕ್ಷರು :— ಸಪರೇಟ್ ನೋಟೀಸ್ ಕೊಡಿ, ಯಾವ ಫಾರಂನಲ್ಲಿ ಅಲೋ ಮಾಡಬೇಕೋ ಮಾಡೋಣ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಆಯಿತು ಕೊಡುತ್ತೇನೆ.

ಅಧ್ಯಕ್ಷರು :— ಕೊಡಿ, ಖಂಡಿತಾ ಅಲೋ ಮಾಡುತ್ತೇನೆ.

(2) ಜಿಲ್ಲಾಪಂಚಾಯತ್ ಅಧ್ಯಕ್ಷರುಗಳಿಗೆ ಕೊಟ್ಟಿರುವ ಅಧಿಕಾರ.

+ಶ್ರೀ ಪಿ.ಜಿ.ಆರ್. ಸಿಂಧ್ಯ (ಹನಕಪುರ) :— ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಕೋರಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನಕ್ಕೆ ತರುವುದಕ್ಕೆ ಒಂದು ವಿಚಾರ ಪ್ರಸ್ತಾಪ ಮಾಡುತ್ತೇವೆ. ಈಗಾಗಲೇ ಇದು ಅವರ ಗಮನಕ್ಕೆ ಬಂದಿದೆ ಎಂದು ನಾನು ಭಾವಿಸುತ್ತೇನೆ. ಜಿಲ್ಲಾ ಪಂಚಾಯಿತಿ ಅಧ್ಯಕ್ಷರುಗಳಿಗೆ 1993ರಲ್ಲಿ ಮತ್ತು1995ರಲ್ಲಿ ಕಾಲಂ 193ರಲ್ಲಿ ನಾವು ಕೊಟ್ಟಿರತಕ್ಕ ಅಧಿಕಾರ ಏನಿದೆ, ಒಂಜಿನಲ್

ಆಕ್ಟ್‌ನಲ್ಲಿ ಪ್ರಾವಿಜನ್ ಮಾಡಿ ಕೊಟ್ಟಿದ್ದೇವೆ. ಅದರ ಮೇಲೆ ಸರ್ಕ್ಯುಲರ್‌ಗಳು ಬಂದಿವೆ. ಆ ಸರ್ಕ್ಯುಲರ್‌ಗಳಿಂದ ಏನೊಂದು ಭಾವನೆ ಬಂದಿದೆ ಅಂದರೆ ಜಿಲ್ಲಾಪಂಚಾಯಿತಿಗಳ ಅಧ್ಯಕ್ಷರು ಎಕ್ಸಿಕ್ಯೂಟಿವ್ ಹೆಡ್ ಆಗುವುದಿಲ್ಲ, ವರ್ಕಿಂಗ್ ರೂಲ್ಸ್ ಫ್ರೇಮ್‌ಮಾಡುವುದರಲ್ಲಿ ಸಿಇಒಗಳು ಎಕ್ಸಿಕ್ಯೂಟಿವ್ ಹೆಡ್ ಎಂದು ಬಂದಿದೆ. ಅನೇಕ ಜಿಲ್ಲಾ ಪಂಚಾಯಿತಿಗಳ ಅಧ್ಯಕ್ಷರು ಮಾನ್ಯ ಸಚಿವರನ್ನು ಭೇಟಿ ಮಾಡಿ ನಮಗೆ ಏನೂ ಅಧಿಕಾರವಿಲ್ಲ, ನಮಗೆ ಏನೂ ಉಪಯೋಗವಿಲ್ಲ ಎನ್ನತಕ್ಕ ಪ್ರಶ್ನೆ ಬಂದಿದೆ. ತಮಗೆ ಗೊತ್ತಿರುವಹಾಗೆ ಜಿಲ್ಲಾ ಪಂಚಾಯಿತಿಗಳಲ್ಲಿ ಅಧಿಕಾರ ವಿಕೇಂದ್ರೀಕರಣವನ್ನು ಮಾಡಿ ಅನೇಕ ಮಹತ್ವದ ಇಲಾಖೆಗಳ ಅಧಿಕಾರವನ್ನು ಅವರಿಗೆ ನಾವು ಕೊಟ್ಟಿದ್ದೇವೆ. ಅದಕ್ಕೆ ಮುಂಚೆ ಇಲಾಖೆಗಳ ಜಾಯಿಂಟ್ ಡೈರೆಕ್ಟರುಗಳು ಇರುತ್ತಿದ್ದರು. ಅವರು ಇನ್ಸ್‌ಪೆಕ್ಷನ್ ಮಾಡಿ ಡೈರೆಕ್ಟರ್‌ಗೆ ತಿಳಿಸುತ್ತಿದ್ದರು. ಅವರು ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದರು. ಉದಾ: ಡೈರೆಕ್ಟರ್ ಆಫ್ ಹೆಲ್ತ್ ಸರ್ವೀಸ್‌ನಲ್ಲಿ ಲೆಜಿಸ್‌ಲೇಚರ್‌ಗೆ ಉತ್ತರ ಕೊಡತಕ್ಕ ಜವಾಬ್ದಾರಿ ಅವರ ಮೇಲಿತ್ತು. ಈಗ ಏನಾಗಿದೆ ಅಂದರೆ ನೇರವಾಗಿ ಯಾವುದೇ ಇಲಾಖೆಯ ಅಧಿಕಾರಿಗಳ ಮೇಲೆ ಅಧ್ಯಕ್ಷರಿಗೆ ಹಿಡಿತವಿಲ್ಲ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ ಅಲ್ಲಿ ಕೆಲಸ ಮಾಡತಕ್ಕ ನೌಕರರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವುದಕ್ಕೆ ಯಾವುದೇ ರೀತಿಯ ಅಧಿಕಾರವಿಲ್ಲ. ಹೀಗಾಗಿ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು ಒಂದು ರೀತಿಯಲ್ಲಿ ನಿಷ್ಕ್ರಿಯರಾಗಿ ಕುಳಿತಿದ್ದಾರೆ. ಸಿಇಒಗಳ ಕೃಪೆಯಲ್ಲಿ ಕೆಲಸ ಮಾಡಬೇಕಾಗಿದೆಯೇ ವಿನಹ, ಅವರು ಯಾವುದೇ ಕೆಲಸ ಮಾಡುವ ಸ್ಥಿತಿಯಲ್ಲಿಲ್ಲ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಒಂದು ಸುತ್ತೋಲೆಯನ್ನು ಹೊರಡಿಸಿ, ನಾನು ತಮಗೆ ವಿವರ ಕಳುಹಿಸಿ ಕೊಡುತ್ತೇನೆ. ದಯಮಾಡಿ ತಾವೇನು ರೂಲ್ಸ್ ಫ್ರೇಮ್ ಮಾಡಿದ್ದೀರಿ ಆ ರೂಲ್ಸನ್ನು ಸ್ವಲ್ಪ ಬದಲಾವಣೆ ಮಾಡಬೇಕಾಗುತ್ತದೆ. ನೌಕರರ ಮುಂಗಡಗಳ ಮಂಜೂರಾತಿ, ಶಿಸ್ತಿನ ಕ್ರಮ ಕ್ರಿಯಾ ಯೋಜನೆಯ ಅನುಮೋದನೆ ಆಡಳಿತಾತ್ಮಕ ಹಣಕಾಸಿನ ವಿಷಯದಲ್ಲಿ ಸಿಇಒ ಅವರು ವಿಲೇ ಮಾಡತಕ್ಕದ್ದು ಎಂದು ಇದೆ. ಅಂದರೆ ಪ್ಲಾನ್ ಸ್ಕೀಮ್‌ನಲ್ಲಿ ಯಾವುದೇ ಒಂದು ಪ್ರೋಗ್ರಾಮ್‌ಗೆ ಮಿನಿವಾಟರ್ ಸಪ್ಲೈಗೆ 2 ಲಕ್ಷ ರೂಪಾಯಿ ಅಲಾಟ್ ಆಗಿದ್ದರೆ, ಆ ಹಣವನ್ನು ಸಹ ರಿಲೀಸ್ ಮಾಡಬೇಕಾದರೂ ಯಾವುದನ್ನು ರಿಲೀಸ್ ಮಾಡಬೇಕಾದರೂ ಕೂಡ ಅಧ್ಯಕ್ಷರ ಗಮನಕ್ಕೆ ತರತಕ್ಕ ಅವಶ್ಯಕತೆ ಇಲ್ಲ. ಅವರೇ ಮಾಡಿಕೊಂಡು ಹೋಗಬಹುದು. ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ ಬರೀ ಜನರಲ್ ಬಾಡಿ ಮೀಟಿಂಗ್‌ಗಳನ್ನು ಮತ್ತು ಕಮಿಟಿಗಳನ್ನು ಫ್ರಸೈಡ್ ಮಾಡತಕ್ಕ ಅಧಿಕಾರ ಮಾತ್ರ ಉಳಿದಿರುತ್ತದೆ ವಿನಹ, ಮತ್ತೆ ಯಾವುದೇ ತರಹದ ಅಧಿಕಾರ ಉಳಿಯುವುದಿಲ್ಲ. ಆದ್ದರಿಂದ ನನಗೆ ಅನ್ನಿಸತಕ್ಕ ಅನೇಕ ವಿಚಾರಗಳನ್ನು ಚರ್ಚೆ ಮಾಡತಕ್ಕದ್ದು ಇದೆ. ಇದುವರೆಗೆ ನೀವು ಚುನಾವಣೆಗಳನ್ನು ಮಾಡತಕ್ಕದ್ದು, ಅವರಿಗೆ ಅಧಿಕಾರ ಕೊಡತಕ್ಕ ವಿಚಾರದಲ್ಲಿ, ಕಳೆದ ಒಂದು ವರ್ಷದಲ್ಲಿ ಯೋಚನೆ ಮಾಡಿದ್ದೀರಿ. ಆದರೆ ಜಿಲ್ಲಾ ಪಂಚಾಯಿತಿಗಳಲ್ಲಿ ಮತ್ತು ತಾಲ್ಲೂಕು

ಪಂಚಾಯಿತಿಗಳಲ್ಲಿ ಗುಣಮಟ್ಟದ ಕೆಲಸ ಆಗತಕ್ಕ ವಿಚಾರದಲ್ಲಿ ಮಂತ್ರಿಗಳು ಗಮನ ಕೊಡುವುದಕ್ಕೆ ಆಗಿಲ್ಲ. ನಾನು ನೇರವಾಗಿ ಹೇಳುತ್ತಿದ್ದೇನೆ, ಇದನ್ನು ಮಾಡಬೇಕಾದರೆ ಜಿಲ್ಲಾ ಪಂಚಾಯಿತಿಗಳ ಅಧ್ಯಕ್ಷರುಗಳಿಗೆ ಸ್ವಲ್ಪ ಹೆಚ್ಚಿನ ಅಧಿಕಾರವನ್ನು ಕೊಡದಿದ್ದರೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ಬರೀ ಹಾಗದದ ಮೇಲೆ ಮಾತ್ರ ಉಳಿಯುತ್ತದೆ. ಇದನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ತಿಳಿದುಕೊಂಡಿದ್ದಾರೆ. ಜಿಲ್ಲಾ ಪಂಚಾಯಿತಿಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳನ್ನು ಕರೆಸಿ ಚರ್ಚೆ ಮಾಡಿದ್ದಾರೆ, ಬಹಳ ಸಂತೋಷ. ಅದು ಅವರು ಸಮರ್ಪಕವಾಗಿ ಕೆಲಸವನ್ನು ಮಾಡುವುದಕ್ಕೆ ಒಂದು ಸುತ್ತೋಲೆಯನ್ನು ಕಳುಹಿಸಿದರೆ ತುಂಬಾ ಅನುಕೂಲವಾಗುತ್ತದೆಂದು ನಾನು ತಿಳಿದಿದ್ದೇನೆ. ದಯಮಾಡಿ ಇದನ್ನು ಪರಿಶೀಲನೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

+ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೆ, ಹಿಂದೆ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಾದ ಘೋರ್ಪಡೆಯವರು ಕಾನೂನಿಗೆ ತಿದ್ದುಪಡಿಯನ್ನು ತಂದಾಗ ನಾವು ಏನು ಹೇಳಿದ್ದೇವೆಂದರೆ, ಅಧಿಕಾರಿಗಳಿಗೆ ಅಧಿಕಾರವನ್ನು ಕೊಡತಕ್ಕದ್ದು ಸರಿ ಎನ್ನುವುದು ನಮ್ಮ ಮುಖ್ಯವಾದ ವಾದ ಅವ್ಯೊತ್ತಿನ ದಿವಸ ಇತ್ತು. ಆದರೆ ನಮ್ಮ ಕೈಗೆ ಅಧಿಕಾರ ಹಸ್ತಾಂತರವಾದಾಗ ನಮಗೆ ಬಹುಮತವನ್ನು, ನಮ್ಮ ಇಷ್ಟದ ಪ್ರಕಾರ ನಾವು ಕಾನೂನನ್ನು ಬದಲಾವಣೆ ಮಾಡಿಕೊಂಡಿದ್ದೇವೆ. ನಮ್ಮ ಕೈಗೆ ಅಧಿಕಾರ 1995ರಲ್ಲಿ ಹಸ್ತಾಂತರ ಆದಮೇಲೆ ತಿದ್ದುಪಡಿ ಮಾಡಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ ಮತ್ತು ಸಿಇಒಗಳಿಗೆ ಅಧಿಕಾರವನ್ನು ಕೊಟ್ಟಿದ್ದೇವೆ. ಜನ ಪ್ರತಿನಿಧಿಗಳಿಗೆ ಯಾವ ಅಧಿಕಾರ ಇರಬೇಕು ಅದಕ್ಕೆ ಕಾನೂನು ತಿದ್ದುಪಡಿ ಮಾಡಿದ್ದೇವೆ. ಸದನದಲ್ಲಿ ಆಗಿರತಕ್ಕ ಕಾನೂನಿಗೆ ವಿರೋಧವಾಗಿ ಅಧಿಕಾರಿಗಳು ಸುತ್ತೋಲೆಯನ್ನು ಹೊರಡಿಸುವ ಮೂಲಕ ದಿನನಿತ್ಯದ ಕಾರ್ಯಕ್ರಮಗಳನ್ನು ಜಿಲ್ಲಾ ಪಂಚಾಯಿತಿ ಅಧ್ಯಕ್ಷರ ಗಮನಕ್ಕೆ ತರಬೇಕಾಗಿಲ್ಲವೆಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. ನಮ್ಮ ಕಾನೂನಿನಲ್ಲಿ ಏನಿದೆ ಅದಕ್ಕೆ ವಿರುದ್ಧವಾಗಿ ಕ್ರಮವನ್ನು ತೆಗೆದುಕೊಂಡಿರತಕ್ಕದ್ದು ಸರಿಯಲ್ಲ. ಈಗ ಏನಾಗಿದೆ ಅಂದರೆ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾಗಿರತಕ್ಕವರು ಕೇವಲ ಉತ್ಸವಮೂರ್ತಿಗಳಾಗಿದ್ದಾರೆ. ಅದನ್ನು ತಾವು ದಯವಿಟ್ಟು ಗಮನಿಸಬೇಕು, ಉತ್ಸವಮೂರ್ತಿಗಳಾಗಿರತಕ್ಕ ಅಧ್ಯಕ್ಷರನ್ನು ಸಿಇಒಗಳು ಎಲ್ಲಿಗಾದರೂ ಹೊತ್ತುಕೊಂಡು ಹೋಗತಕ್ಕವರು. ಜನ ಪ್ರತಿನಿಧಿಗಳಿಗೆ ಅಧಿಕಾರವನ್ನು ಕೊಡಬೇಕೆನ್ನುವ ಮೂಲ ಉದ್ದೇಶ ಏನಿತ್ತು ಅದಕ್ಕೆ ಭಂಗ ತರತಕ್ಕ ಕೆಲಸ ಇದರಿಂದ ಆಗಿದೆ. ಅವರು ಒಳ್ಳೆಯವರೋ ಕೆಟ್ಟವರೋ ಎನ್ನುವ ಬಗ್ಗೆ ಅವರು ಯಾವರೀತಿ ಕೆಲಸ ಮಾಡಬೇಕೆನ್ನುವ ಬಗ್ಗೆ ಚರ್ಚೆ ಮಾಡೋಣ. ಅವರದು ತಪ್ಪಾಗಿದ್ದರೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು, ಅದನ್ನು ಮಾಡೋಣ. ಅಧಿಕಾರ ಕೊಡತಕ್ಕ ಸಂದರ್ಭದಲ್ಲಿ ನಾವು ಈ ರೀತಿ ಜೌಷಾ ಮಾಡತಕ್ಕದ್ದು ಸರಿಯಲ್ಲ. ಜಿಲ್ಲಾ ಪಂಚಾಯಿತಿ ಅಧ್ಯಕ್ಷರನ್ನು ಕೇವಲ ಉತ್ಸವಮೂರ್ತಿಯಾಗಿ ಇಡತಕ್ಕದ್ದು ಸರಿಯಲ್ಲ, ಲೋಪ ಏನಾಗಿದೆ ಅದನ್ನು ಸರಿಪಡಿಸುವುದಕ್ಕೆ ವಿಚಾರ

ಮಾಡಬೇಕು. ಮಾತೆತ್ತಿದರೆ ವಿಕೇಂದ್ರೀಕರಣ, ವಿಕೇಂದ್ರೀಕರಣವೆಂದು ಹೇಳುತ್ತೀರಿ, ಆ ತಿದ್ದುಪಡಿಗೆ ವಿರೋಧವಾದ ರೀತಿಯಲ್ಲಿ ಕೆಲಸವನ್ನು ಮಾಡಿದೆ, ಅದನ್ನು ಸರಿಪಡಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

+ ಶ್ರೀ ಎಂ.ಪಿ ಫೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿ) :— ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯನ್ನು ಸಭೆಯ ಮುಂದಿಟ್ಟಿದ್ದಕ್ಕಾಗಿ ತಮಗೆಲ್ಲರಿಗೂ ಧನ್ಯವಾದಗಳು. ಒಂದು ಮಾತನ್ನು ನಾನು ಪ್ರಾರಂಭದಲ್ಲೇ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಿಂಧ್ಯರವರು ಸೆಕ್ಷನ್ 193(ಎ)ಬಗ್ಗೆ ಏನು ಪ್ರಸ್ತಾಪ ಮಾಡಿದರು ಅದು ನಾವು ಮಾಡಿರತಕ್ಕ ಕಾನೂನು. ಅದು ನೀವು ಮಾಡಿರತಕ್ಕಂಥ ಕಾನೂನು ಅಲ್ಲ. ಮೂಲಭೂತವಾದಂಥ ಅಧಿಕಾರ ಕೊಡುವುದಕ್ಕೆ ಎಷ್ಟು ಸಾಧ್ಯ ಅಷ್ಟರಮಟ್ಟಿಗೆ ಕೊಡುವಂಥ ಒಂದು ಪ್ರಯತ್ನ ಇದು. ಎಲೆಕ್ಟೆಡ್ ಬಾಡೀಸ್ ಆಫೀಸರ್ಸ್ ಏನಿದ್ದಾರೆ- they must work under the supervision and control of the elected body. ಅಂತ ಹೇಳಿ ಅದು ಬಹಳ ಸ್ಪಷ್ಟವಾಗಿದೆ. ಆದಕಾರಣ ಯಾರು ಅಧಿಕಾರ ನಡೆಸಬೇಕು, ಯಾರು ಅದನ್ನು ಅನುಷ್ಠಾನಗೊಳಿಸಬೇಕು, ಎಂಬುದರ ಬಗ್ಗೆ ಯಾವ ಒಂದು ಭಿನ್ನಾಭಿಪ್ರಾಯವೂ ಇಲ್ಲ. ನಾವು ಸಂಪೂರ್ಣವಾದ ಅಧಿಕಾರವನ್ನು ಕೊಟ್ಟಿದ್ದೇವೆ. ನಿಮ್ಮ ಕಾಲಕ್ಕೆ ಒಂದು ನಾಯಕ್ ಕಮಿಟಿ ಎನ್ನುವ ಎಕ್ಸ್‌ಪರ್ಟ್ ಕಮಿಟಿಯನ್ನು ಮಾಡಿದಿರಲ್ಲ, ಇದೇ ಪ್ರಶ್ನೆಯನ್ನು ಅವರು ಕೂಡ ಎತ್ತಿ ಹೇಳಿದ್ದಾರೆ. ಈ 93ರ ಕಾಯಿದೆ ಪ್ರಕಾರ ಏನು ಅಧಿಕಾರವನ್ನು ಎಲೆಕ್ಟೆಡ್ ಜನಕ್ಕೆ, ಅಧ್ಯಕ್ಷರಿಗೆ ಕೊಟ್ಟಿದ್ದೇವೆ, ಅವರು ಅಡ್ಮಿನಿಸ್ಟ್ರೇಟಿವ್ ಹೆಡ್ ಆಗಿದ್ದಾರೆ ಮತ್ತು ಎಲ್ಲ ಅಡ್ಮಿನಿಸ್ಟ್ರೇಟಿವ್ ಪವರ್ಸ್ ಅವರಿಗೆ ಕೊಟ್ಟಾಗಿದೆ. ಇದರಲ್ಲಿ ಏನೂ ಅನುಮಾನ ಇಲ್ಲ. ಮೊದಲು ಏನು ವ್ಯವಸ್ಥೆ ಇತ್ತು, ಅದಕ್ಕಿಂತ ಒಂದು ಜೂರು ಜಾಸ್ತಿನೇ ಅಧಿಕಾರ ಕೊಟ್ಟಿದ್ದಾರೆ ಎಂಬ ಮಾತನ್ನು ನಿಮ್ಮ ಎಕ್ಸ್‌ಪರ್ಟ್ ಕಮಿಟಿಯವರು ನಿಮ್ಮ ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದಾರೆ. ಆದಕಾರಣ ಅಧಿಕಾರ ಕೊಡುವುದರ ಪ್ರಶ್ನೆ ಇಲ್ಲಿ ಬರುವುದಿಲ್ಲ. ಪ್ರಶ್ನೆ ಏನು ಬರುತ್ತದೆ ಎಂದರೆ ಅಧಿಕಾರವನ್ನು ಯಾವರೀತಿ ನಡೆಸಬೇಕು? ನಾವು ಚರ್ಚೆ ಮಾಡುವಂಥಾದ್ದು ಏನು? ಹೊಸದಾಗಿ ಎಲ್ಲ ಕಡೆಯಿಂದ ಅಧ್ಯಕ್ಷರು ಆರಿಸಿ ಬಂದಿದ್ದಾರೆ, ಅವರು ತಮ್ಮ ಪಾರ್ಟಿಗೆ ಸೇರಿದವರು ಇದ್ದಾರೆ. ಆದಕಾರಣ..

ಶ್ರೀ ಸಿ. ಬೈರೇಗೌಡ :— ಇದರಲ್ಲಿ ನಮ್ಮವರು ನಿಮ್ಮವರು ಎನ್ನುವ ಪ್ರಶ್ನೆ ಇಲ್ಲ.

ಶ್ರೀ ಎಂ.ಪಿ. ಫೋರ್ಪಡೆ :— ನಮ್ಮವರು ಕೂಡ ಒಬ್ಬರು ಇದ್ದಾರೆ, ಅದು ಇರಲಿ, ನಾನು ಅದನ್ನು ಹೇಳಿದ ಉದ್ದೇಶ ಏನೆಂದರೆ, ನಾವು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಮಗೆ ಏನೂ ಅಡಚಣೆ ಇಲ್ಲ. ಕೆಲವು ದಿವಸಗಳ ಹಿಂದೆ ಮೀಟಿಂಗ್ ಮಾಡಿದ್ದೆವು. ಆಗ ಅಡ್ಮಿನಿಸ್ಟ್ರೇಶನ್ ಮಾಡುವಾಗ ಕೆಲವು ಅನುಮಾನಗಳು ಏನು ಬರುತ್ತವೆ ಅದರ ಬಗ್ಗೆ ಅವರು ದಿಬ್ಬುಮನಸ್ಸಿನಿಂದ ಪ್ರಸ್ತಾಪ ಮಾಡಿದರು ಮತ್ತು ನಾನು

ಕೂಡ ಅಷ್ಟೇ ಬಿಚ್ಚುಮನಸ್ಸಿನಿಂದ ಆ ಒಂದು ವಿಚಾರ ಹೇಳಿದೆ. ಉದಾಹರಣೆಗೆ ಹೇಳುವುದಾದರೆ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ನಿಮ್ಮ ಅಧೀನವಾಗಿದ್ದರೆ ನಿಮಗೆಯಾವ ಫೈಲ್ ಬೇಕೋ ಅದನ್ನು ತರಿಸುವುದಕ್ಕೆ ಆಗುತ್ತದೆ. ಖಂಡಿತ ಅದರಲ್ಲಿ ಏನೂ ಅನುಮಾನ ಇಲ್ಲ. ಇದು ಏನಾಗುತ್ತಿದೆ ಎಂದರೆ, ಅವರು ಫೈಲು ಕೊಡುವ ಮಟ್ಟಕ್ಕೆ ಸಿ.ಇ.ಓ.ಗಳು ಹೋಗಿಲ್ಲ. ಆದರೆ ಸಾಮಾನ್ಯವಾಗಿ ಪ್ರತಿಯೊಂದು ಫೈಲು ಅಧ್ಯಕ್ಷರ ಕಡೆಗೆ ಬರುವ ಅವಶ್ಯಕತೆ ಇರುವುದಿಲ್ಲ. ನಾನು ಹೇಳಿದೆ, ಏನೆಂದರೆ ನಾನು ತೀರ್ಮಾನ ಮಾಡುವುದಿಲ್ಲ, ನೀವೇ ತೀರ್ಮಾನ ಮಾಡಿ. ಸಿ.ಇ.ಓ.ರನ್ನು ಕರೆದು ಇಂತಹ ಫೈಲುಗಳು ನಮ್ಮ ಮುಂದೆ ಬರಬೇಕು, ಯಾವ ಕೆಲಸವನ್ನು ನಮಗೆ ತಿಳಿಸದೆಯೇ ಮಾಡಬಾರದು, ಇದನ್ನು ನೀವೇ ತೀರ್ಮಾನ ಮಾಡಿ. ನಿಮಗೆ ಸಾಕಷ್ಟು ಅಧಿಕಾರ ಇದೆ. ನಾನು ತೀರ್ಮಾನ ಮಾಡುವಂಥಾದ್ದು ಅಲ್ಲ ಎಂದು. They were satisfied with that. ಆಮೇಲೆ ಎಲ್ಲ ಸಿ.ಇ.ಓ.ಗಳು ಕೂಡ ಬಂದಿದ್ದರು. ಅವರಿಗೆ ನಾನು ಹೇಳಿದೆ- you have to work under the direction, control and supervision of the elected body. ಇದರಲ್ಲಿ ಎರಡು ಅಭಿಪ್ರಾಯ ಇಲ್ಲವೇ ಇಲ್ಲ. ಮತ್ತೆ ಯಾವಾಗಲೂ ಅಧಿಕಾರದ ವಿರುದ್ಧವಾಗಿ ನಡೆದುಕೊಳ್ಳುವಂಥ ಸಂದರ್ಭ ದಿನಾ ಬರುವುದಿಲ್ಲ; ಬಂದರೆ ಮಾತ್ರ ಅವರು ಸರ್ಕಾರಕ್ಕೆ ಅದನ್ನು ರೆಫರ್ ಮಾಡುತ್ತಾರೆ. ಈ ತಿದ್ದುಪಡಿ ಕೂಡ ನಾವು ನಮ್ಮ ಕಾಲದಲ್ಲಿ ಮಾಡಿದ್ದನ್ನು ನೀವು ಅಧಿಕಾರದಲ್ಲಿದ್ದಾಗ ಅದರ ಪ್ರಕಾರ ನಡೆದುಕೊಂಡಿರಿ. ಅದನ್ನು ತಿದ್ದುಪಡಿ ಮಾಡುವ ಕೆಲಸಕ್ಕೆ ಕೈಹಾಕಿಲ್ಲ. ಆದಕಾರಣ ನಾವು ಏನು ಅಧಿಕಾರ ಕೊಟ್ಟಿದ್ದೇವೆ ಅದು ನಮಗೂ ಮಾನ್ಯ ನಮ್ಮ ಸರ್ಕಾರಕ್ಕೂ ಮಾನ್ಯ. ಅದರಲ್ಲಿ ಒಂದೊಂದು ಸಲ ಸಿ.ಇ.ಓ. ಮಾತು ಕೇಳಿಲ್ಲ ಎಂದು ಬರುತ್ತದೆ. ಅದಕ್ಕೆ ನಾನು ಹೇಳಿದ್ದೇನೆ; ಅಂಥಾದ್ದು ಏನಾದರೂ ಭಿನ್ನಾಭಿಪ್ರಾಯ ಬಂದರೆ ನೇರವಾಗಿ ನೀವು ನನ್ನನ್ನು ಕೇಳಬಹುದು, ನನಗೆ ಹೇಳಬಹುದು, ನಾನು ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದ್ದೇನೆ. ಇವತ್ತು ಆ ಸಭೆಯಾದನಂತರ ಇಂತಹ ಕ್ಲಿಷ್ಟಕರವಾದ ಭಿನ್ನಾಭಿಪ್ರಾಯದ ವಿಷಯಗಳು ಬರಲಿಲ್ಲ. ಬಂದರೆ ನಾವು ಖಂಡಿತವಾಗಿಯೂ ಅದನ್ನು ಸರಿಮಾಡುತ್ತೇವೆ. ಆದರಲ್ಲಿ ಯಾರಿಗೂ ಅನುಮಾನ ಇರಬೇಕಾಗಿಲ್ಲ. ಈಗ ಫೈಲು ಬಗ್ಗೆ ಹೇಳಿದೆ. ಆಮೇಲೆ ಕ್ವಾಲಿಟಿ ಕಂಟ್ರೋಲ್ ಬಗ್ಗೆ ತಾವು ಹೇಳಿದ್ದೀರಿ. ಇದರ ಬಗ್ಗೆ ಎಲ್ಲ ಜವಾಬ್ದಾರಿಯೂ ಇದೆ. ಒಂದು ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಎಂಟು-ಹತ್ತು ವರ್ಷಗಳಿಂದ ನಾವು ಪಂಚಾಯತ್ ರಾಜ್ ವ್ಯವಸ್ಥೆಯನ್ನು ನಡೆಸಿಕೊಂಡು ಬಂದಿದ್ದೇವೆ. ಆದರೂ ಎಲ್ಲ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಎಲೆಕ್ಟೆಡ್ ಬಾಡಿ ಎಷ್ಟರಮಟ್ಟಿಗೆ ಆದರಲ್ಲಿ ಆಸಕ್ತಿ ತೋರಿಸಬೇಕು ಅಷ್ಟು ತೋರಿಸಿಲ್ಲ. ಅವರು ಸ್ವತಃ ಹೋಗಿ ಇನ್ ಸ್ಪೆಕ್ಟ್ ಮಾಡಬೇಕು, ಏನಾದರೂ ಅನುಮಾನ ಬಂದರೆ ನೋಡಬೇಕು. ಕ್ವಾಲಿಟಿ ಕಂಟ್ರೋಲ್ ಮಾಡಿಸಬೇಕು. ಈ ಕೆಲಸ ಏನಿದೆ ಅಷ್ಟು ತೃಪ್ತಿಕರವಾಗಿ ಎಂಟು-ಹತ್ತು ವರ್ಷಗಳಿಂದ ನಡೆದಿಲ್ಲ. ಇದು ನಮ್ಮ ತಪ್ಪು, ನಿಮ್ಮ ತಪ್ಪು,

ಎನ್ನುವ ಪ್ರಶ್ನೆ ಅಲ್ಲ. ಯಾವುದೇ ಅಭಿವೃದ್ಧಿ ಕೆಲಸಗಳಾಗಲೀ, ವಿಶ್ವಬ್ಯಾಂಕ್‌ಗೆ ಸಂಬಂಧಪಟ್ಟ ಯೋಜನೆಗಳು ಸೇರಿ, ಇದು ನಮಗೆ ಸಂಬಂಧಪಟ್ಟದ್ದು ಅಲ್ಲ ಎಂದು ನಮ್ಮ ಜಿಲ್ಲಾಪಂಚಾಯತ್ ನವರು ಹೇಳಬಾರದು. ಅದು ಸರಿಯಲ್ಲ. ಏನಾದರೂ ಅಭಿವೃದ್ಧಿ ಕಾರ್ಯಗಳಾಗಲಿ ಅದು ಪಿಡಿಎಸ್ ಆಗಲಿ, ಅಥವಾ ವಿಶ್ವಬ್ಯಾಂಕ್ ಯೋಜನೆಗಳು ಆಗಲಿ, ಅದರ ಕಡೆಗೆ, ಅದರ ಗುಣಮಟ್ಟದ ಕಡೆಗೆ ಲಕ್ಷ್ಯ ಕೊಡುವಂಥ ಜವಾಬ್ದಾರಿ ನಿಮ್ಮದು ಅಂತ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಅದಕ್ಕೋಸ್ಕರ ಈ ಫೈಲ್ ವರ್ಕ್ ಏನಿದೆ ಅದು ಅಷ್ಟು ಅವಶ್ಯಕ ಇದೆ ಎಂದು ನಿಮಗೆ ಅನ್ನಿಸಿದರೆ ಅಷ್ಟು ಮಾತ್ರ ಮಾಡಿ. ಆದರೆ ನಿಮ್ಮ ವೇಳೆಯನ್ನು ಇನ್‌ಸ್ಪೆಕ್ಷನ್ ಮಾಡುವುದರಲ್ಲಿ ಉಪಯೋಗಿಸಿ ಎಂದು ಹೇಳಿದ್ದೇನೆ. ನೀವು ಮತ್ತಿ ಸಿ.ಇ.ಓ. ಇನ್‌ಸ್ಪೆಕ್ಷನ್ ಮಾಡಿ ಅಲ್ಲಿ ಏನಾದರೂ ತಪ್ಪನ್ನು ಕಂಡುಹಿಡಿದರೆ ತಪ್ಪಿತಸ್ಥರನ್ನು ಸಸ್ಪೆಂಡ್ ಮಾಡುವ ಅಧಿಕಾರ ಸಿ.ಇ.ಓ.ಗೆ ಕೂಡ ಇದೆ. ಸಿ.ಇ.ಓ.ಗೆ ಇಂತಹವರನ್ನು ಸಸ್ಪೆಂಡ್ ಮಾಡಿ ಎಂದು ಹೇಳಿದರೆ ಅವರು ಮಾಡುವುದಿಲ್ಲ ಎನ್ನುವುದಿಲ್ಲ. ಅಂತಹ ಸಂದರ್ಭ ಇದುವರೆಗೂ ನನ್ನ ಗಮನಕ್ಕೆ ಬಂದಿಲ್ಲ. ಅಧ್ಯಕ್ಷರು- President is the Administrative Head, CEO is the bureaucratic head. ನೀವು ಜತೆಜತೆಯಾಗಿ ಸೇರಿ, ಸಾಮರಸ್ಯದಿಂದ ಹೋದರೆ ಇಂತಹ ಯಾವ ಸಮಸ್ಯೆಗಳೂ ಬರುವುದಿಲ್ಲ ಎಂಬ ಮಾತನ್ನು ಹೇಳಿದ್ದೇನೆ. ಇನ್ನು ಕ್ವಾಲಿಟಿ ಕಂಟ್ರೋಲ್ ಬಗ್ಗೆ ಥರ್ಡ್ ಪಾರ್ಟಿ ಇನ್‌ಸ್ಪೆಕ್ಷನ್ ಮಾಡಿಸಬೇಕು. ಈಗ ತಮಗೆಲ್ಲರಿಗೂ ಗೊತ್ತಿದೆ, ಏನಾದರೂ ತಪ್ಪು, ನಮ್ಮ ಗಮನಕ್ಕೆ ಕಂಡುಬಂದರೆ ನಾವು ಅದನ್ನು ಕ್ಷಮಿಸುವುದಿಲ್ಲ. ತಕ್ಷಣ ಅವರನ್ನು ಸಸ್ಪೆಂಡ್ ಮಾಡಿ ಮೂರು ತಿಂಗಳಲ್ಲಿ ಅದನ್ನು ವಿಚಾರಣೆ ಮಾಡುವಂಥ ವ್ಯವಸ್ಥೆ ಇದೆ. ಅದನ್ನು ನಾವು ಈಗಾಗಲೇ ಮಾಡುತ್ತಿದ್ದೇವೆ. ಅದನ್ನು ನಿರ್ಲಕ್ಷ್ಯ ಮಾಡುವ ಪ್ರಶ್ನೆ ಇಲ್ಲ. ಅದೇ ರೀತಿ ಅಧ್ಯಕ್ಷರು ಏನಿದ್ದಾರೆ, ಅವರು ಪ್ರವಾಸ ಮಾಡುವಾಗ ಅಂತಹ ವಿಷಯಗಳು ಅವರ ಗಮನಕ್ಕೆ ಬಂದರೆ ಕೂಡಲೇ ಕ್ರಮ ತೆಗೆದುಕೊಳ್ಳುವ ಎಲ್ಲಾ ಜವಾಬ್ದಾರಿ ಅವರಿಗೆ ಇದೆ. ಈಗ ನಾನು ಹತ್ತು ಜಿಲ್ಲೆಗಳಿಗೆ ಹೋಗಿ ಬಂದಿದ್ದೇನೆ. ಅಲ್ಲಿ ಒಂದೊಂದು ಕಡೆ ಇಂತಹ ಎರಡು-ಮೂರು ಉದಾಹರಣೆಗಳನ್ನು ನಮ್ಮ ಗಮನಕ್ಕೆ ತಂದರು. ಅದು ಯಾರದ್ದು ಎಂದು ನಾನು ಹೇಳುವುದಿಲ್ಲ. ತಕ್ಷಣ ಅಲ್ಲಿ ಇನ್‌ಸ್ಪೆಕ್ಷನ್ ಮಾಡಿ ಅವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವಂಥ ಕೆಲಸವನ್ನು ನಾವು ಮಾಡಿದ್ದೇವೆ. ಮಿಸ್-ಅಪ್ರೊಪ್ರಿಯೇಶನ್ ಕೇಸ್‌ಗಳಲ್ಲಿ, ಅದರಲ್ಲಿ ಏನಾದರೂ ವಿಳಂಬವಾದರೆ ನಾವು ಕನ್‌ವೆನ್‌ಶನ್ಸ್ ಮಾಡ್ತೀವಲ್ಲ, ಅಲ್ಲಿ ಬಹಿರಂಗವಾಗಿ ಜನರು ಹೇಳಿದ್ದಾರೆ ಮತ್ತು ಪ್ರತಿನಿಧಿಗಳು ಕೂಡ ಹೇಳಿದ್ದಾರೆ. ಇಂತಿಂಥ ಕಡೆ ಕೆಲಸದಲ್ಲಿ ಆ ಕ್ರಮವಾಗಿದೆ ಎಂದು ಅವರು ಹೇಳಿದಾಗ ತಕ್ಷಣ ನಾವು ಕ್ರಮ ತೆಗೆದುಕೊಂಡಿದ್ದೇವೆ. ಆದಕಾರಣ ಕ್ರಮ ತೆಗೆದುಕೊಳ್ಳುವಂಥ ಜವಾಬ್ದಾರಿ ಇವತ್ತು ಬರೇ ಸಿ.ಇ.ಓ.ಗೆ, ಅಧ್ಯಕ್ಷರಿಗೆ ಬಿಟ್ಟಿದ್ದು ಅಲ್ಲ. ಎಲ್ಲ ಚುನಾಯಿತ ಪ್ರತಿನಿಧಿಗಳು ಏನಿದ್ದಾರೆ, 80 ಸಾವಿರ ಜನರು ಏನಿದ್ದಾರೆ ಅವರ ಮೇಲೆ ನಾವು ಈ ಜವಾಬ್ದಾರಿಯನ್ನು

ಹಾಕುತ್ತಿದ್ದೇವೆ. ಅವರು ಏನಾದರೂ ತಪ್ಪು ಕಂಡುಹಿಡಿದರೆ ಆ ವಿಷಯದಲ್ಲಿ ನಿರ್ಲಕ್ಷ್ಯ ಆಗದಂತೆ ನೋಡಿಕೊಳ್ಳುವ ಜವಾಬ್ದಾರಿ ತಮ್ಮದಾಗಿದೆ ಎಂದು ಹೇಳಿದ್ದೇನೆ. ಈಗ ಬಾಂಡೆಡ್ ಲೇಬರರ್ಸ್ ಬಗ್ಗೆ ಒಂದು ಬಿಲ್‌ನ್ನು ತರುವವರಿದ್ದೇವೆ. ಇದರ ಬಗ್ಗೆ 20 ವರ್ಷಗಳಾದ ನಂತರ ಮೊನ್ನೆ ಏನು ನಡೆಯಿತು, ಅದು ಬಹಳ ಆಶ್ಚರ್ಯಕರವಾದಂಥ ಘಟನೆ. ಇದಕ್ಕೆ ನಾವು ಏನು ಮಾಡುತ್ತಿದ್ದೇವೆ ಎಂದರೆ, ಪಂಚಾಯತ್ ಮೆಂಬರ್‌ಗಳನ್ನು ಜವಾಬ್ದಾರರನ್ನಾಗಿ ಮಾಡುತ್ತಿದ್ದೇವೆ. ಏಕೆಂದರೆ ನಾಲ್ಕು ಜನರು ಒಬ್ಬರನ್ನು ಆರಿಸಿದ ನಂತರ ಅವರಿಗೆ ಗೊತ್ತಿರಲೇಬೇಕು. ಆದ್ದರಿಂದ ಇಂಥಾದ್ದರ ಬಗ್ಗೆ ರಿಪೋರ್ಟ್ ಮಾಡುವಂಥ ಜವಾಬ್ದಾರಿ ಅವರಿಗೆ ಇರಬೇಕಾಗುತ್ತದೆ. ಇವತ್ತಿನದಿವಸ ಎಷ್ಟೋ ಕಾಮಗಾರಿಗಳ ಬಗ್ಗೆ ನಿರ್ಲಕ್ಷ್ಯ ಏಕೆ ಆಗುತ್ತಿತ್ತು ಎಂದರೆ ಆ ಜನಕ್ಕೆ ಇದು ನಮ್ಮ ಜವಾಬ್ದಾರಿ ಅಲ್ಲ, ಅದು ನೇರವಾಗಿ ಸರ್ಕಾರ ಮಾಡುವಂಥಾದ್ದು ಎನ್ನುವ ಭಾವನೆಯನ್ನು ಬೆಳೆಸಿಕೊಂಡು ಬಂದಿದ್ದೇವೆ. ತಮಗೂ ಸಾಕಷ್ಟು ಅನುಭವ ಇದೆ. ಈ ಭಾವನೆಯನ್ನು ಇವತ್ತು ನಾವು ತೆಗೆದುಹಾಕಬೇಕು. ವಿಶ್ವಬ್ಯಾಂಕಿನ ಅಧ್ಯಕ್ಷರು ಮೊನ್ನೆ ಇಲ್ಲಿಗೆ ಬಂದಾಗ ಅವರು ಕೂಡ ಅದೇ ಅಭಿಪ್ರಾಯಪಟ್ಟರು. maximum decentralisation; maximum transparency ಆದರೇನೇ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ದಿಸೆಯಲ್ಲಿ ನಾವು ಹೊರಟಿದ್ದೇವೆ ಮತ್ತು ಅಧ್ಯಕ್ಷರು ಏನಿದ್ದಾರೆ ಅವರು ನಮ್ಮ ಪಾರ್ಟಿಗೆ ಸೇರಿರಲಿ, ಅಥವಾ ನಿಮ್ಮ ಪಾರ್ಟಿಗೆ ಸೇರಿರಲಿ ಮೂರು ತಿಂಗಳಿಗೊಮ್ಮೆ ವರ್ಕ್‌ಶಾಪ್ ಮಾಡಿ ಅದರಲ್ಲಿ ಏನೇನು ಸಮಸ್ಯೆಗಳು ಬರುತ್ತವೆ, ಅದನ್ನು ಸರಿಪಡಿಸುವುದಕ್ಕೋಸ್ಕರ, ಅದರಲ್ಲಿ ಏನಾದರೂ ಅಸ್ಪಷ್ಟವಾದಂಥ ವಿಚಾರ ಇದ್ದರೆ ಎಲ್ಲೆಲ್ಲಿ ಸರ್ಕ್ಯುಲರ್‌ಗಳನ್ನು ಕಳಿಸಬೇಕು ಎನ್ನುವುದನ್ನು ಕೂಡ ನಾವು ರಿವ್ಯೂ ಮಾಡುತ್ತೇವೆ. ಮೂರು ತಿಂಗಳಿಗೆ ಒಂದು ಸಲ ರಿವ್ಯೂ ಮಾಡುತ್ತೇವೆ. ಆ ಮೂರು ತಿಂಗಳೂ ಕಾಯಬೇಕೆಂದು ಇಲ್ಲ. ಎಷ್ಟು ಸಲ ಮೀಟ್ ಮಾಡುವ ಅವಶ್ಯಕತೆ ಇದೆಯೋ ಅಷ್ಟು ಸಲ ಮೀಟ್ ಮಾಡುತ್ತೇವೆ. ಗವರ್ನೆನ್ಸ್ ಎಂದರೆ ಕಾನೂನು ಪ್ರಕಾರ ರೂಲ್ಸ್ ಮಾಡಿ, ಕನ್‌ವೆನ್‌ಷನ್ಸ್ ಮಾಡಿ ಇದರ ಪ್ರಕಾರ ಈ ಕೆಲಸ ಬಂದರೆ, ಈ ರೀತಿ ಮಾಡಬೇಕು. ಇದೇನಿದೆ ಎಂದರೆ, ಆಡಳಿತದ ಅನುಭವದ ಪ್ರಶ್ನೆ. ಈ ಅನುಭವ ಜಾಸ್ತಿಯಾದಾಗಲೆಲ್ಲಾ ನಾವು ಅದನ್ನು ರೆಗ್ಯುಲರೈಸ್ ಮಾಡುತ್ತಾ ಹೋಗುತ್ತೇವೆ. ಅದನ್ನು ಮಾಡುವಾಗ ಒಂದು ಪ್ರಿನ್ಸಿಪಲ್ ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಮೊನ್ನೆ ಒಂದು ಸಭೆಯಲ್ಲಿ ಈ ಮಾತನ್ನು ಹೇಳಿದರು; ``The officers have to work under the control and supervision of the elected body". ಇದರ ಬಗ್ಗೆ ಎರಡು ಅಭಿಪ್ರಾಯ ಇಲ್ಲ. ಈಗ ನಾವು ಹೊಸದಾಗಿ ಅವರ ಅಧಿಕಾರವನ್ನೂ ಮೊಟಕು ಮಾಡುವುದಕ್ಕೆ ಹೊರಟಿದ್ದೇವೆ ಎಂಬ ವಿಚಾರ ಬರಲಿಕ್ಕೆ ಅವಕಾಶ ಇಲ್ಲ. ನಾವು ಪಾರದರ್ಶಕವಾಗಿ ಹೋಗೋಣ. ಆ ಮೂರು ತಿಂಗಳ ಸಭೆಯಲ್ಲಿ ನಮ್ಮ ಅನುಭವಗಳು ಏನಿದೆ,

ಒಳ್ಳೆಯದು-ಕೆಟ್ಟದ್ದು ಅದನ್ನು ನಾವೇ ಸರಿ ಮಾಡಿಸಲಿಕ್ಕೆ ಹೋಗುತ್ತೇವೆ. ಮತ್ತೆ ಅದರಲ್ಲಿ ತಮಗೆ ಏನಾದರೂ ಕಂಡುಬಂದರೆ, ಅಧ್ಯಕ್ಷರ ಅಧಿಕಾರಕ್ಕೆ ಮತ್ತು ಎಲೆಕ್ಟೆಡ್ ಬಾಡಿ ಏನಿದೆ, ಅವರ ಅಧಿಕಾರಕ್ಕೆ ನಾವು ಧಕ್ಕೆ ತರುತ್ತಿದ್ದೇವೆ ಅಥವಾ ಅಧಿಕಾರವನ್ನು ಮೊಟಕು ಮಾಡುತ್ತಿದ್ದೇವೆ ಎಂಬ ಮಾತು ಇದ್ದರೆ ಖಂಡಿತವಾಗಿಯೂ ನಾವು ಅದರ ಬಗ್ಗೆ ತೆರೆದ ಮನಸ್ಸಿನಿಂದ ಇರುತ್ತೇವೆ.

ಅಧ್ಯಕ್ಷರು :— ಅವರ ಮೂಲ ಪ್ರಶ್ನೆ ಏನೆಂದರೆ, ಮೈಯಿನ್ ಆಕ್ಟ್ ಏನಿದೆಯೋ ಅದರ ಸ್ಪಿರಿಟ್ಟನ್ನೇ ಸುತ್ತೋಲೆಗಳ ಮೂಲಕ ಹೊಡೆದು ಹಾಕುತ್ತಿದ್ದಾರೆ, ಆದ್ದರಿಂದ ಆ ಸುತ್ತೋಲೆಗಳನ್ನು ಸರಿಪಡಿಸಿ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಎಂ.ವೈ. ಘೋರ್ಪಡೆ :— ಮಾನ್ಯ ಅಧ್ಯಕ್ಷರೇ, ಅವರು ಹೇಳಿದ್ದೇನೆಂದರೆ, ಹಿಂದೆ ಕಳುಹಿಸಿರತಕ್ಕ ಸುತ್ತೋಲೆಗಳು ಆ ಅಭಿಪ್ರಾಯ ಕೊಡಲಿಕ್ಕೆ ಅವಕಾಶ ಇದೆಯೆಂದು ಹೇಳಿದರು. ಉದಾಹರಣೆಗಾಗಿ ಸ್ಟಾಂಡಿಂಗ್ ಕಮಿಟಿ ವಿಷಯ ಅದರಲ್ಲಿದೆ. ತಾವು ಹೇಳಿದಿರಿ, ಸ್ಟಾಂಡಿಂಗ್ ಕಮಿಟಿ ಎಂದರೆ ಸರ್ವಾಧಿಕಾರಿಗಳು ಅಲ್ಲ. ಸರ್ವಾಧಿಕಾರಿಗಳು ಎಂದರೆ ಎಲೆಕ್ಟೆಡ್ ಬಾಡಿ ಇದೆ. ಆದಕಾರಣ, ಸ್ಟಾಂಡಿಂಗ್ ಕಮಿಟಿ ಮಾಡುವ ಕೆಲಸವನ್ನು ಅವರು ಮಾಡಬೇಕು. ಮತ್ತೆ ಅಧಿಕಾರ ಕೊಟ್ಟ ತಕ್ಷಣ, ಎಲೆಕ್ಟೆಡ್ ಬಾಡಿಗೆ ಅಧಿಕಾರವನ್ನು ನಾವು ಕಡಿಮೆ ಮಾಡಿದ್ದೇವೆಂಬ ಅರ್ಥ ಬರುವುದಿಲ್ಲ ಎಂಬ ಸ್ಪಷ್ಟೀಕರಣ ಕೂಡ ನಾವು ಕೊಟ್ಟಿದ್ದೇವೆ. ಹಿಂದೆ ಕಳುಹಿಸಿರತಕ್ಕ ಅನೇಕ ಕರೆಸ್ಪಾಂಡೆನ್ಸ್ ನಮ್ಮ ಗಮನಕ್ಕೆ ಬರದೇ ಸಿ.ಇ.ಓ.ರವರು ಮಾಡಿರುತ್ತಾರೆ. ಅದನ್ನು ಮಾಡಲಿಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಅವರು ಅಧ್ಯಕ್ಷರ ಗಮನಕ್ಕೆ ತರದೇ, ಅವರಿಗೆ ತಿಳಿದಿದ್ದೇ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಹಾಗಾಗುತ್ತಿದ್ದರೆ, ನಾವು ಅವರನ್ನು ಕರೆದು ಹೇಳಬೇಕು. ಈ ರೀತಿ ಮುಚ್ಚಟ್ಟು ಯಾವ ಕೆಲಸ ಮಾಡುವ ಅಧಿಕಾರ ಇಲ್ಲ. ಬಹಿರಂಗವಾಗಿ ಅಧ್ಯಕ್ಷರಿಗೆ ಹೇಳಿಯೇ ಮಾಡಬೇಕೆಂದು ನಾವು ಹೇಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ :— ನನ್ನ ಮೂಲಭೂತವಾದ ಪ್ರಶ್ನೆ ಏನಿದೆ ಎಂದರೆ, ಮಾನ್ಯ ಮಂತ್ರಿಗಳು ನಾನು 10 ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದೇನೆ, ಎಂದು ಹೇಳಿದರು ಗುಣಮಟ್ಟದ ಬಗ್ಗೆ ಅವರು ಹೇಳಬೇಕು. ಇದು ನಮ್ಮ ಸರ್ಕಾರ, ನಿಮ್ಮ ಸರ್ಕಾರದ ಪ್ರಶ್ನೆ ಅಲ್ಲ. ಅಧಿಕಾರದ ವಿಕೇಂದ್ರೀಕರಣ ಆದನಂತರ, ಅಲ್ಲಿರತಕ್ಕ ವ್ಯವಸ್ಥೆಗಳೇ ಬೇರೆ ಮಟ್ಟದಲ್ಲಿ ಆಗುತ್ತಿದೆ. ಅನೇಕ ಜನ ಶಾಸಕರುಗಳು ಶಿಕ್ಷಣ ಇಲಾಖೆಯಲ್ಲಿ ಕೊಳ್ಳತಕ್ಕ ಪದಾರ್ಥಗಳಿರಬಹುದು, ಕುಡಿಯುವ ನೀರಿನ ಯೋಜನೆಯಲ್ಲಿ ಉಪಯೋಗಿಸಿರತಕ್ಕ ಪೈಪುಗಳ ಗುಣಮಟ್ಟ ಇರಬಹುದು, ಪ್ರತಿಯೊಂದು ವಿಚಾರದಲ್ಲಿಯೂ ಸಹಿತ, ಇಲ್ಲಿರತಕ್ಕ ಎಲ್ಲಾ ಜಿಲ್ಲಾಮಂತ್ರಿಗಳಿಗೆ ಮತ್ತು ಶಾಸಕರುಗಳಿಗೆ ಇರತಕ್ಕ ಅನುಭವವೇ ಬೇರೆ ಇದೆ. ಆ ಗುಣಮಟ್ಟವನ್ನು ಹೆಚ್ಚು ಮಾಡಬೇಕೆಂದು ಹೇಳಿದರೆ, ಚುನಾಯಿತ ಪ್ರತಿನಿಧಿಗಳಿಗೆ ಹೆಚ್ಚಿನ ಅವಕಾಶವನ್ನು

ಮಾಡಿಕೊಡುವುದರಿಂದ ಆಗುತ್ತದೆ. ನಾವೇನು ಹೇಳುತ್ತಿದ್ದೇವೆ. ಸುತ್ತೋಲೆಗಳ ಮೂಲಕವಾಗಿ ರೂ.193ರ ಸ್ಪಿರಿಟ್ ಏನಿದೆ, ಅದು ಡೈಲ್ಯೂಟ್ ಆಗಿದೆ ಎಂದು ಹೇಳತಕ್ಕಂಥಾದ್ದು. ತಾವೇನು ಮೂರು ತಿಂಗಳಿಗೊಂದು ಸಾರಿ ಸಭೆ ಕರೆಯುತ್ತೇವೆಂದು ಹೇಳಿದ್ದೀರಿ, ಅದರ ಜೊತೆಗೆ ಗುಣಮಟ್ಟವನ್ನು ಹೆಚ್ಚು ಮಾಡುವ ದೃಷ್ಟಿಯಿಂದಾಗಿ, actually there is lot of confusion and chaos in that level, ಅದನ್ನು ಸರಿ ಮಾಡಿಸಬೇಕು. ಇದನ್ನು ಮಂತ್ರಿಗಳಾಗಿ ತಾವೊಬ್ಬರೇ ಮಾಡುವುದಕ್ಕಾಗುವುದಿಲ್ಲ. ಶಾಸಕರು, ಜಿಲ್ಲಾ ಪಂಚಾಯಿತಿ ಅಧ್ಯಕ್ಷರುಗಳು, ಚುನಾಯಿತ ಪ್ರತಿನಿಧಿಗಳು ಎಲ್ಲರೂ ಸಹಕಾರ ಕೊಡಬೇಕಾಗುತ್ತದೆ. ಅದರಿಂದಾಗಿ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಆ ಸುತ್ತೋಲೆಗಳನ್ನು ಕಳುಹಿಸಿ ಆ ಸ್ಪಿರಿಟನ್ನು ಡೈಲ್ಯೂಟ್ ಮಾಡಿದೆ. ಇದು ತೊಂದರೆ ಬಂದಿರತಕ್ಕಂಥಾದ್ದು.

ಶ್ರೀ ಎಂ.ವೈ. ಘೋರ್ಪಡೆ :— ಆ ಸ್ಪಿರಿಟ್‌ನ್ನು ಡೈಲ್ಯೂಟ್ ಮಾಡುವ ಉದ್ದೇಶ ಇಲ್ಲ. ಆ ಸ್ಪಿರಿಟನ್ನು ಲೆಟರ್-ಹ್ಯಾಂಡ್ ಸ್ಪಿರಿಟ್ ಆಗಿ ನಾವು ಕಾಪಾಡಿಕೊಂಡು ಹೋಗುತ್ತೇವೆ. ಹೊಸದಾಗಿ ಆರಿಸಿ ಬಂದಿರತಕ್ಕ ಜನ ಒಂದೊಂದು ಸಲ ಅವರಿಗೆ ಸಾಕಷ್ಟು ಅನುಭವ ಇರುವುದಿಲ್ಲ. ಅದಕ್ಕೋಸ್ಕರ ನಾವು ತರಬೇತಿಗಾಗಿ ಬಹಳ ಮಹತ್ವ ಕೊಡುತ್ತಾ ಇದ್ದೇವೆ. ಕಂಟಿನ್ಯೂಯಸ್ ಟ್ರೈನಿಂಗ್ ಪ್ರೋಗ್ರಾಂ ಮಾಡುತ್ತಾ ಇದ್ದೇವೆ. ಇದರಿಂದ ಈ ವಿಷಯಗಳನ್ನು ನನ್ನ ಜೊತೆಗೆ, ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ, ಸರಿಪಡಿಸಲಿಕ್ಕೆ ಅವರಿಗೆ ಅವಕಾಶವಾಗುತ್ತದೆ.

ಶ್ರೀ ಸಿ. ಬೈರೇಗೌಡ :— ಕುದುರೆ ಲಗಾಮು ಸವಾರನ ಕೈಯಲ್ಲಿ ಇರಬೇಕು. ಕುದುರೆ ಕೈಲಿ ಲಗಾಮು ಇರಬಾರದು. ಇಷ್ಟೇ ನಮ್ಮ ಉದ್ದೇಶ ಇರತಕ್ಕಂಥಾದ್ದು. ಆ ಕೆಲಸವನ್ನು ತಾವು ದಯವಿಟ್ಟು ಮಾಡಿ.

(ಈ) ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದ ಮರಣ ಹೊಂದಿದವರಿಗೆ ಪರಿಹಾರ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ತುರುವೇಕೆರೆ) :— ಮಾನ್ಯ ಅಧ್ಯಕ್ಷರೇ, ಮೊನ್ನೆ ಆದಂಥ ಅತಿವೃಷ್ಟಿಯಲ್ಲಿ ನನ್ನ ತಾಲ್ಲೂಕಿನಲ್ಲಿ ಜೀಪೊಂದು ಕೊಚ್ಚಿ ಹೋಗಿ, ಅದರಲ್ಲಿದ್ದ ಮೂರು ಜನ ಮರಣ ಹೊಂದಿದರು ಎಂಬ ಮಾತನ್ನು ನಾನು ಸರ್ಕಾರದ ಗಮನಕ್ಕೆ ತೆಗೆದುಕೊಂಡುಬಂದೆ. ಅದರಲ್ಲಿ ರಸ್ತೆ ಸಂಪರ್ಕ ಕೂಡ ಕಡಿದು ಹೋಗಿದೆ ಎಂಬುದನ್ನೂ ಹೇಳಿದ್ದೇನೆ. ಇದುವರೆಗೂ ಆ ರಸ್ತೆ ಯಾವುದೇ ಕಾರಣಕ್ಕೂ ರಿಪೇರಿಯಾಗಿಲ್ಲ. ಅವರಿಗೆ ಸಂಬಂಧಪಟ್ಟಂತೆ ಪರಿಹಾರ ಕೂಡ ಸರಿಯಾಗಿ ಆಗಿಲ್ಲ. ಮೂರು ಜನಕ್ಕೆ ಒಂದೊಂದು ಲಕ್ಷ ರೂಪಾಯಿ ಪರಿಹಾರ ಕೊಟ್ಟಿದ್ದಾರೆ. ಇವತ್ತು ಆ ಸಂಬಂಧಪಟ್ಟ ವ್ಯಕ್ತಿ ಒಂದು ಎಜುಕೇಷನ್ ಸೊಸೈಟಿಯ ಕಾರ್ಯದರ್ಶಿಯಾಗಿ ಕೆಲಸ ಮಾಡಿ, ಸುಮಾರು ನೂರಾರು